# ವೃತ್ತಿಯಲ್ಲಿ ಆನಂದ

## ನಾಗಾರ್ಜುನ ಬಿ. ರಾಜಶೇಖರ್

ಕಲರ್ಸ್ ಸೂಪರ್ 'ಮಗಳು ಜಾನಕಿ'ಯ ಆನಂದ ಬೆಳಗೂರು



★ *ಐಪಿಎಸ್ ಗತ್ತು ಪಾತ್ರದಲ್ಲಿ ಕಾಣುತ್ತಿಲ್ಲ ಎನ್ನುವ ಆಕ್ಷೇಪ ಪ್ರೇಕ್ಷಕರಲ್ಲಿದೆಯಲ್ಲ... ನೀವೇನಂತೀರಿ?*

ಹೌದು. ವೀಕ್ಷಕರ ಆಕ್ಷೇಪವನ್ನು ನಾನೂ ಓದಿದ್ದೇನೆ. ಪಾತ್ರ ಒಬ್ಬೊಬ್ಬರ ದೃಷ್ಟಿಯಲ್ಲಿ ಒಂದೊಂದು ರೀತಿಯಲ್ಲಿ ಕಾಣಿಸುತ್ತಾ ಹೋಗುತ್ತದೆ. ಕಥೆಯ ಅಗತ್ಯದಂತೆ ಪಾತ್ರ ಅನಾವರಣವಾಗುತ್ತದೆ. ಐಪಿಎಸ್ ಪರೀಕ್ಷೆ ಬರೆದ ಮಾತ್ರಕ್ಕೆ ವೃತ್ತಿ ಕೌಶಲ್ಯಗಳು ಸಿದ್ಧಿಸುವುದಿಲ್ಲ. ಇನ್ನು ಮೌಖಿಕ ಪರೀಕ್ಷೆ ಬಾಕಿ ಇದೆ. ತರಬೇತಿ ಮಾಡಬೇಕಿದೆ. ನಂತರವಷ್ಟೇ ಅಧಿಕಾರಿ. ಈಗ ಸಾಮಾನ್ಯ ಪದವೀಧರ ಅಷ್ಟೆ. ಮಾತ್ರವಲ್ಲದೆ, ಚಾಲಕನ ಮಗ. ಆ ವರ್ಗದ ಹುಡುಗನಿಗೆ ಇರಬೇಕಾದ ಮುಗ್ಧತೆ, ಹಿಂಜರಿಕೆಯನ್ನು ಪಾತ್ರ ಬಿಂಬಿಸುತ್ತದೆ. ಮೇಲಾಗಿ ಕಾತ್ಯಾಯಿನಿ ಮೆನನ್ ಸಾವು ದೊಡ್ಡ ಆಘಾತವನ್ನು ಉಂಟು ಮಾಡಿದೆ. ಜಾನಕಿಯನ್ನು ಪ್ರಾಣಕ್ಕಿಂತ ಪ್ರೀತಿಸುವ ನನಗೆ ಐಪಿಎಸ್‌ಗಿಂತ ಅದೇ ದೊಡ್ಡದು.

★ *ಜಾನಕಿಯನ್ನು ನೀವೇ ಮದುವೆ ಆಗಬೇಕಿತ್ತು ಅಲ್ವಾ?*

ವೀಕ್ಷಕರ ಅಪೇಕ್ಷೆ ಇರುವುದು ಸಹಜ. ಕಥೆಯ ಮುಂದಿನ ಹೆಜ್ಜೆಗಳನ್ನು ಈಗಲೇ ಹೇಳಲು ಆಗುವುದಿಲ್ಲ. ಕಥೆ ಕೇಳಬಾರದು, ಕಥೆ ಗೊತ್ತಾದರೆ ಕುತೂಹಲ ಉಳಿಯುವುದಿಲ್ಲ. ಕಾದು ನೋಡಿ ಎಂದು ಹೇಳಲು ಬಯಸುತ್ತೇನೆ.

★ *ನಿಮ್ಮ ನಿರೀಕ್ಷೆಗಳು ಏನಿವೆ?*

ವೃತ್ತಿಯನ್ನು ಅನುಭವಿಸಿ ಆನಂದಿಸಬೇಕು. ಆಗ ವೃತ್ತಿಯಿಂದ ತೃಪ್ತಿಯನ್ನು ಪಡೆಯಲು ಸಾಧ್ಯ. ಹಲವು ವೃತ್ತಿಗಳನ್ನು ನಿರ್ವಹಿಸಿದ್ದೇನೆ. ಸಿಕ್ಕಾಪಟ್ಟೆ ಸುತ್ತಾಡಿದ್ದೇನೆ. ಮಾನವ ಸಂಪನ್ಮೂಲ (ಎಚ್‌ಆರ್) ವಿದ್ಯಾರ್ಥಿಗಳಿಗೆ ಸಾಫ್ಟ್ ಸ್ಕಿಲ್ ಪಾಠವನ್ನೂ ಮಾಡಿದ್ದೇನೆ. ಆಗೆಲ್ಲಾ ನನಗೆ ನಿತ್ಯ ಹೊಸದನ್ನು ಕಲಿಯಬೇಕು ಅನ್ನಿಸಿದೆ. ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಸಿನಿಮಾ ನಿರ್ಮಿಸಿದ್ದೇನೆ. ಹೊಸ ಸಿನಿಮಾ ಮಾಡುವ ತಯಾರಿಯಲ್ಲಿದ್ದೇನೆ.

★ *ನಿಮ್ಮ ಪಯಣದ ಹಾದಿಯನ್ನು ಒಮ್ಮೆ ನೆನಪಿಸಿ.*

ನಟನೆಯನ್ನು 2013ರಿಂದ ಆರಂಭಿಸಿದೆ. ಅದಕ್ಕೂ ಮುನ್ನ ದೊಡ್ಡ ಅಪಘಾತವಾಗಿತ್ತು. ಆಗ ನನ್ನ ಗೆಳೆಯ ಮೃತಪಟ್ಟಿದ್ದ, ನನಗೆ ತೀವ್ರ ಪೆಟ್ಟಾಗಿತ್ತು. ಸ್ವಲ್ಪ ದಿನ ಹಾಸಿಗೆ ಹಿಡಿಯಬೇಕಾಯಿತು. ಗುಣ ಹೊಂದಿದ ಮೇಲೆ ನಮ್ಮ ತಂದೆಯ ಉದ್ಯಮ ನೋಡಿಕೊಳ್ಳಬೇಕಾಯಿತು. ನನ್ನ ನಿರಾಸಕ್ತಿ ಕಂಡು ನನ್ನ ಚಿಕ್ಕಪ್ಪ ಚಿತ್ರಕಲೆ ಕಲಿಯಲು ಹೇಳಿದರು. ಕಲೆಯಲ್ಲಿ ನನಗೆ ಆಸಕ್ತಿ ಕೂಡ ಇತ್ತು. ಒಂದು ಚೌಕಟ್ಟಿನಲ್ಲಿ ಬಂಧಿಯಾಗಿ ಕೆಲಸ ಮಾಡುವುದು ಇಷ್ಟ ಆಗಲಿಲ್ಲ. ಅಭಿನಯ ಮಾಡೋಣ ಅನ್ನಿಸಿತು. ನನ್ನ ಬಯಕೆಗೆ ರಂಗಭೂಮಿ ನೀರೆರೆಯುತ್ತದೆ ಎನ್ನುವ ಹಿರಿಯರ ಸಲಹೆಯಂತೆ 'ಎಂಇಎಸ್ ರಂಗಶಾಲೆ'ಗೆ ಸೇರಿದೆ. ಅವರು 'ಕಾಲಜ್ಞಾನಿ ಕನಕ' ನಿರ್ಮಿಸುತ್ತಿದ್ದರು. ನನಗೆ ಚಿಕ್ಕ ಪಾತ್ರ ಕೊಡುವುದಾಗಿ ಹೇಳಿದ್ದರು. ಅದೃಷ್ಟಕ್ಕೆ ಮುಖ್ಯ ಪಾತ್ರಧಾರಿ ಏನೋ ತೊಂದರೆಯಿಂದ ತಾಲೀಮಿಗೆ ಬರಲಿಲ್ಲ. ಬಯಸದೆ ನನಗೆ ದೊಡ್ಡ ಪಾತ್ರ ಸಿಕ್ಕಿತು. ಅದು ತುಂಬಾ ಪ್ರದರ್ಶಗಳನ್ನು ಕಂಡಿದೆ. ಮಿಲನ ಪ್ರಕಾಶ್ ಅವರ 'ಕನಕ' ಕಿರು ಚಿತ್ರದಲ್ಲಿ ಮುಖ್ಯಪಾತ್ರ ನಿರ್ವಹಿಸಿದೆ. ಸಾವು ದೇಹಕ್ಕೆ ಹೊರತು ಆತ್ಮಕ್ಕಲ್ಲ ಎನ್ನುವ ಸಾರವಿರುವ **Evil Dead in Kannada** ಎನ್ನುವ ಚಿತ್ರವನ್ನು ನಿರ್ದೇಶಿಸಿ, ನಟಿಸಿದೆ (**www.youtube.com/watch?v=UyseetgyKEI**) ಈಗಲೂ ನೋಡಬಹುದು.

ಕೌಟುಂಬಿಕ ಸಮಸ್ಯೆಯಿಂದ ಎಂಟು ತಿಂಗಳು ಸೊಲ್ಲಾಪುರ ಸೇರಿದೆ. ಮತ್ತೆ ಬೆಂಗಳೂರಿಗೆ ಬಂದು 'ಶುದ್ಧಿ' ಸಿನಿಮಾ ಮಾಡಿದೆ. ಸ್ಕ್ರಿಪ್ಟ್ ಬರೆಯುವ ಬಯಕೆಯಿಂದಾಗಿ ಬಿ.ಎಂ.ಗಿರಿರಾಜ್ ಪರಿಚಯವಾಯಿತು. ಅವರ ಜೊತೆ 'ಅಮರಾವತಿ' ಸಿನಿಮಾದಲ್ಲಿ ಸಹನಿರ್ದೇಶಕನಾಗಿ ಕೆಲಸ ಮಾಡಿದೆ. ನನಗೆ ರಾಜ್ಯ ಪ್ರಶಸ್ತಿ ಬಂತು. ಅದೇ ಸಮಯದಲ್ಲಿ 'ನಾಗಿಣಿ' ಮತ್ತು 'ಮನೆದೇವ್ರು'ನಲ್ಲಿ ಸಹನಟನಾಗಿ ಸೀರಿಯಲ್ ಪ್ರವೇಶ ಮಾಡಿದೆ. ಸೀತಾರಾಂ ಅವರ 'ಮಹಾಪರ್ವ'ಕ್ಕೆ ಆಡಿಷನ್‌ಗೆ ಕರೆ ಬಂತು. ಸಕಾಲಕ್ಕೆ ಹೋಗದೆ ಪಾತ್ರವನ್ನು ಕಳೆದುಕೊಂಡೆ. ಈಗ ಅವರದೇ 'ಮಗಳು ಜಾನಕಿ'ಯಲ್ಲಿ ಪ್ರಮುಖ ಪಾತ್ರಕ್ಕೆ ಅವಕಾಶ ಸಿಕ್ಕಿದೆ. ಮುಂದೆ ಸಿನಿಮಾ ನಿರ್ಮಾಣ ಮತ್ತು ನಿರ್ದೇಶನ ನನ್ನ ಗುರಿ.

■ ರಾಘವೇಂದ್ರ